**ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ,**
**ಸುಳ್ಯ, ದ.ಕ. ಇವರ ನ್ಯಾಯಾಲಯದಲ್ಲಿ -**

**ಸಿ.ಸಿ.ನಂ.276/2022**

**ಸಿ.ಡಬ್ಲ್ಯೂ-1**

**ಪಿ.ಡಬ್ಲೂ -1**

ಸಾಕ್ಷಿದಾರರ ಹೆಸರು : ಜಿ.ವಿ.ಲಕ್ಷ್ಮೀನಾರಾಯಣ್
ತಂದೆಯ ಹೆಸರು : ವೆಂಕಟರಮಣ
ವಯಸ್ಸು : 64 ವರ್ಷ
ಉದ್ಯೋಗ : ನಿವೃತ್ತ ಅಂಚೆ ಅಧೀಕ್ಷಕರು
ವಾಸ : ಮಂಗಳೂರು.
ದಿನಾಂಕ : 17-10-2023

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

## ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು ಮೇ 2001 ರಿಂದ ನವೆಂಬರ್ 2004 ರವರೆಗೆ ಸುಳ್ಯ ಉಪವಿಭಾಗದ ಅಂಚೆ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನನಗೆ ಚಾ.ಸಾ.2 ರಿಂದ 4 ಹಾಗೂ 8 ಮತ್ತು 9 ರವರ ಪರಿಚಯ ಇರುತ್ತದೆ. ಆರೋಪಿಯನ್ನು ನನಗೆ ಪರಿಚಯ ಇರುತ್ತದೆ.

ಆರೋಪಿಯು ಮರ್ಕಂಜ ಅಂಚೆ ಕಚೇರಿಯಲ್ಲಿ ಏಪ್ರಿಲ್ 2002 ರಿಂದ ದಿನಾಂಕ 11-02-2004 ರವರೆಗೆ ಶಾಖಾ ಅಂಚೆ ಪಾಲಕರಾಗಿ ಕರ್ತವ್ಯದಲ್ಲಿ ಇದ್ದರು. ಆರೋಪಿಯು ಅಂಚೆ ಕಚೇರಿಗೆ ಜಮೆ ಮಾಡಿದ ಉಳಿತಾಯ ಹಾಗೂ ಆವರ್ತನ ಖಾತೆಯ ಹಣವನ್ನು ಪಡೆದು ಕಚೇರಿಯ ಲೆಕ್ಕ ಪುಸ್ತಕಗಳಲ್ಲಿ ಹಾಗೂ ಪಾಸ್ ಪುಸ್ತಕದಲ್ಲಿ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ನಮೂದು ಮಾಡಿ ಮತ್ತು ಪ್ರತಿನಿತ್ಯದ ಲೆಕ್ಕವನ್ನು ದೊಡ್ಡತೋಟದ ಅಂಚೆ ಕಚೇರಿಗೆ ತಲುಪಿಸಬೇಕಾಗಿ ಮತ್ತು ಹಣವನ್ನು ಸಹಾ ದೊಡ್ಡತೋಟ ಅಂಚೆ ಕಚೇರಿಗೆ ಕಳುಹಿಸಬೇಕೆಂದು ಈ ಎಲ್ಲಾ ಕೆಲಸ ಆರೋಪಿಯ ಸಂಪೂರ್ಣ ಜವಾಬ್ದಾರಿಯಾಗಿತ್ತು. ಅಂಚೆ ಪಾಲಕನ ಕರ್ತವ್ಯಗಳನ್ನು ರೂಲ್ಸ್ ಆಫ್ ಬ್ರಾಂಚ್ ಪೋಸ್ಟ್ ಆಫೀಸ್ ಪುಸ್ತಕದಲ್ಲಿ ಹೇಳಲಾಗಿದೆ.

ದಿನಾಂಕ 18-11-2002 ರಿಂದ ದಿನಾಂಕ 05-02-2004 ರವರೆಗೆ ಎರಡು ಉಳಿತಾಯ ಹಾಗೂ ಒಂದು ಆವರ್ತನ ಖಾತೆ (ಆರ್.ಡಿ.) ಯಲ್ಲಿ ಪಡೆದ ಹಣವನ್ನು ಸಂಬಂಧಪಟ್ಟ ಖಾತೆದಾರರ ಪುಸ್ತಕದಲ್ಲಿ ಆರೋಪಿಯು ನಮೂದಿಸಿದ್ದಾರೆ. ಆದರೆ ಶಾಖೆಯ ಸಂಬಂಧಪಟ್ಟ ಲೆಕ್ಕ ಪುಸ್ತಕಗಳಲ್ಲಿ ನಮೂದಿಸಿಲ್ಲ ಮತ್ತು ಹಣವನ್ನು ದೊಡ್ಡತೋಟ ಅಂಚೆ ಕಚೇರಿಗೆ ಕಳುಹಿಸಿಕೊಟ್ಟಿಲ್ಲ. ಹೀಗೆ ಅವರು ಒಟ್ಟು ರೂ.14,150-00 ಹಣವನ್ನು ದುರುಪಯೋಗ ಮಾಡಿರುತ್ತಾರೆ. ದಿನಾಂಕ 12-02-2004 ರಂದು ನಾನು ಸದ್ರಿ ಶಾಖೆಯ ತಪಾಸಣೆಗೆ ಹೋದಾಗ ನನಗೆ ಈ ವಿಷಯ ತಿಳಿಯಿತು. ಆ ದಿನ ಆರೋಪಿ ಕಚೇರಿಗೆ ಬಂದಿರಲಿಲ್ಲ. ನಂತರ ನಾವು ಲೆಕ್ಕ ಪುಸ್ತಕಗಳನ್ನು ಪಾಸ್ ಪುಸ್ತಕಗಳೊಂದಿಗೆ ತಾಳೆ ಮಾಡಿದಾಗ ವಿಷಯ ಬೆಳಕಿಗೆ ಬಂತು. ಖಾತೆದಾರರನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿನಾಂಕ 04-07-2004 ರಂದು ನಿಪಿ-1 ರಂತೆ ಪೊಲೀಸ್ ದೂರನ್ನು ನೀಡಿರುತ್ತೇನೆ. ನಿಪಿ-1(ಬಿ) ನನ್ನ ಸಹಿಯಾಗಿದ್ದು ಮತ್ತು ದೂರಿನೊಂದಿಗೆ ದೂರಿನಲ್ಲಿ ನಮೂದಿಸಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅದನ್ನು ನೋಡಿದರೆ ಗುರುತಿಸಬಹುದು. ಪೋಲಿಸರು ಸದ್ರಿ ಪುಸ್ತಕಗಳನ್ನು ಅದೇ ದಿನ ಮಹಜರು ಮೂಲಕ ಅಮಾನತುಪಡಿಸಿದರು. ನಾನು ಈಗ ನಿಪಿ-3 ನ್ನು ನೋಡುತ್ತಿದ್ದು, ಅದು ಸದ್ರಿ ಮಹಜರು ಆಗಿರುತ್ತದೆ. ಅದರಲ್ಲಿರುವ ನಿಪಿ-3(ಬಿ) ನನ್ನ ಸಹಿಯಾಗಿರುತ್ತದೆ. ನಿಪಿ-4 ರಿಂದ 24 ರವರೆಗಿನ ದಾಖಲೆಗಳು, ನಾನು ದೂರಿನೊಂದಿಗೆ ಹಾಜರುಪಡಿಸಿದ ದಾಖಲೆಗಳಾಗಿರುತ್ತದೆ. ಆರೋಪಿಯು ನಂತರ ಕರ್ತವ್ಯಕ್ಕೆ ಬಂದಿರುವುದಿಲ್ಲ .

ಆರೋಪಿಯು ಈಗ ನ್ಯಾಯಾಲಯದಲ್ಲಿ ಹಾಜರಿದ್ದು, ಅವರನ್ನು ನೋಡಿ ಗುರುತಿಸುತ್ತೇನೆ.

( ವಕೀಲರ ಕೋರಿಕೆ ಮೇರೆಗೆ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ನೀಡಲಾಯಿತು. )

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಯವರು, ಸುಳ್ಯ , ದ.ಕ.